

# ಊರುಗೋಲು ಓಟಗಾರ!

ಕೈ ಕಾಲುಗಳು ಸರಿಯಾಗಿರುವವರೇ ಜೀವನದಲ್ಲಿ ಯಾವ ಸಾಧನೆಯನ್ನೂ ಮಾಡದೇ ಮರೆಯಾಗುತ್ತಾರೆ. ಇಲ್ಲೊಬ್ಬ ದಿವ್ಯಾಂಗನಿದ್ದಾನೆ, ಚಿತ್ರ ನೋಡಿ. ಜರ್ಮನಿಯ ಬವೇರಿಯಾದಲ್ಲಿ ನಡೆದ 100 ಮೀಟರ್ ಓಟದ ಸ್ಪರ್ಧೆಯಲ್ಲಿ ಅದ್ಭುತ ಪ್ರದರ್ಶನ ನೀಡಿ ಜಾಗತಿಕ ದಾಖಲೆ ಬರೆದಿದ್ದಾನೆ. ಇದೇನು ಮಹಾ ಅಂತೀರಾ? ಆತ ಹೇಗೆ ಓಡಿದ ಗೊತ್ತೇ? ಎರಡೂ ಕೈಗಳಲ್ಲಿ ಊರುಗೋಲು ಹಿಡಿದು, ಕಾಲುಗಳನ್ನು ತಲೆಯ ಮೇಲ್ಭಾಗದಲ್ಲಿ ನೇತಾಡಿಸುತ್ತ 100 ಮೀಟರ್ ಓಟವನ್ನು 56 ಸೆಕೆಂಡುಗಳಲ್ಲಿ ಮುಗಿಸಿದ! ಇವನೇ 32 ವರ್ಷದ ತಮೇರು ಜಿಗೆಯೆ.

ಹುಟ್ಟುವಾಗಲೇ ಎರಡೂ ಕಾಲುಗಳ ವಿಕಲತೆಯಿತ್ತು. ಆತ ಇದರಿಂದ ವಿಚಲಿತನಾದರೂ ಸಾಧನೆ ಮಾಡುವ ಸಂಕಲ್ಪ ಮಾಡಿದ. ಆತನ ಆರಾಧ್ಯ ದೈವ ಜಮೈಕಾದ ಉಸೇನ ಬೋಲ್ಟ. ಹೀಗಾಗಿ ಓಟದ ಹಾದಿ ಹಿಡಿದ. ನಡೆದಾಡುವಾಗಲೂ ಊರುಗೋಲನ್ನು ಕೈಗಳಲ್ಲಿ ಹಿಡಿದು ಕಾಲು ಮೇಲೆ ಮಾಡಿ ಸಾಗುತ್ತಿದ್ದ.

'ಜಾಗತಿಕ ಮಟ್ಟದ ಸಾಧನೆ ಮಾಡಬೇಕೆಂಬುದು ಮೊದಲಿನಿಂದಲೂ ನನ್ನ ಕನಸಾಗಿತ್ತು. ಈಗ ಒಂದೊಂದಾಗಿ ಸಾಧನೆ ಮಾಡಿ , ದಿವ್ಯಾಂಗನಾಗಿದ್ದೂ ಬೇಕಾದಷ್ಟು ಸಾಧಿಸಬಲ್ಲೆ ಎಂಬುದನ್ನು ಜಗತ್ತಿಗೆ ತೋರಿಸುತ್ತೇನೆ' ಎನ್ನುತ್ತಾನೆ ತಮೇರು ಜಿಗೆಯೆ.

■ ಪ್ರಕಾಶ

